THE NEW INDIAN EXPRESS
Online Newspaper Clipping Service
**Dtd- Tuesday, 11th, June- 2019**
**Page No.01**

# MBBS seats up by 4,500 in govt colleges

SUMI SUKANYA DUTTAE
@ New Delhi

THE number of MBBS seats on offer have increased by over 4,500 for the upcoming academic session as compared to last year — marking probably the sharpest rise in the seats in medical colleges in a single year in the country.

A total of 74,215 students will get admission into MBBS course with government medical colleges accounting for 36,222 seats. Last year, totally, 69,712 MBBS seats were available. The data submitted by the the Medical Council Of India-Board of Governors to the Union Ministry of Health and Family Welfare, accessed by this newspaper, shows that 33 new medical colleges have been permitted this year —majority of which are district hospitals being upgraded into teaching hospitals. The biggest beneficiary is Uttar Pradesh where 7,102 students will get into MBBS course this year whereas last year this number was 6,499. Karnataka, with a total of 9,195 seats, however continues to have the largest number of MBBS seats in the country. In 2018, this number was 8,845.

# ವೈದ್ಯಕೀಯ ಕಾಲೇಜುಗಳಾಗಿ ಜಿಲ್ಲಾಸ್ಪತ್ರೆ

ನವದೆಹಲಿ(ಪಿಟಿಐ): ಆರೋಗ್ಯ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲದ ಲಭ್ಯತೆಯನ್ನು ಹೆಚ್ಚಿಸುವ ಉದ್ದೇಶದಿಂದ ಆರೋಗ್ಯ ಸಚಿವಾಲಯವು 75 ಜಿಲ್ಲಾಸ್ಪತ್ರೆಗಳನ್ನು ವೈದ್ಯಕೀಯ ಕಾಲೇಜುಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸಿದ್ಧಪಡಿಸಿದೆ.

ದೇಶದ ಹಿಂದುಳಿದ ಜಿಲ್ಲೆಗಳಲ್ಲಿ ಜಿಲ್ಲಾಸ್ಪತ್ರೆಗಳನ್ನು ವೈದ್ಯಕೀಯ ಕಾಲೇಜುಗಳನ್ನಾಗಿ ಮೇಲ್ದರ್ಜೆಗೇರಿಸುವ ಕೇಂದ್ರ ಸರ್ಕಾರದ ಯೋಜನೆಯ ಭಾಗವಾಗಿ ಈ ಪ್ರಸ್ತಾವನೆ ರೂಪಿಸಲಾಗಿದೆ. ಇದನ್ನು ಹಣಕಾಸು ವೆಚ್ಚ ಸಮಿತಿಗೆ ಕಳುಹಿಸಲಾಗಿದ್ದು, ಬಳಿಕ ಇದನ್ನು ಸಂಪುಟದ ಒಪ್ಪಿಗೆಗೆ ಕಳುಹಿಸಲಾಗುವುದು ಎಂದು ಮೂಲಗಳು ಹೇಳಿವೆ. ಪ್ರತಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ₹325 ಕೋಟಿ ಮೊತ್ತದ ಅವಶ್ಯಕತೆ ಇದೆ ಎಂದು ಪ್ರಸ್ತಾವನೆಯ ಕರಡು ಪ್ರತಿಯಲ್ಲಿ ವಿವರಿಸಲಾಗಿದೆ.

ಆರೋಗ್ಯ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲದ ಕೊರತೆಯಿಂದಾಗಿ ಗ್ರಾಮೀಣ ಪ್ರದೇಶ, ಬುಡಕಟ್ಟು ಮತ್ತು ಬೆಟ್ಟ ಪ್ರದೇಶಗಳಲ್ಲಿ ಆರೋಗ್ಯ ಸೌಕರ್ಯ ಒದಗಿಸುವುದು ಕಷ್ಟವಾಗಿದೆ. ಹೊಸ ಯೋಜನೆಯು ಜಾರಿಗೆ ಬಂದರೆ 10 ಸಾವಿರ ಎಂಬಿಬಿಎಸ್ ಸೀಟುಗಳು ಮತ್ತು 8 ಸಾವಿರ ಸ್ನಾತಕೋತ್ತರ ಸೀಟುಗಳು ಹೆಚ್ಚುವರಿಯಾಗಿ ಲಭ್ಯವಾಗಲಿವೆ. ಇದರಿಂದ ದೇಶದಲ್ಲಿ ಆರೋಗ್ಯ ಸೇವೆಯನ್ನು ಇನ್ನಷ್ಟು ಸಮರ್ಪಕಗೊಳಿಸಲು ಸಹಕಾರಿ ಆಗಬಹುದು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

SDUAHER